# ಶ್ರೀಮತಿ ಜಯಶ್ರೀ ಕುಲಕರ್ಣಿ ಯವರ ಬಿಳ್ಕೊಡುಗೆಯ ಸಮಾರಂಭ

ಶ್ರೀಮತಿ ಜಯಶ್ರೀ ಕುಲಕರ್ಣಿ ಇವರು ಸುಮಾರು 35 ವರ್ಷಗಳ ಕಾಲ ಉಪ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿದ್ದು ಇದೇ 31/08/2025 ರಂದು ನಿವೃತ್ತರಾದರು. ತನ್ನಿಮಿತ್ತ ಅವರ ಕೊನೆಯ ಕೆಲಸದ ದಿನವಾದ 29/08/2025 ರಂದು ಸಂಸ್ಥೆಯು ಅವರಿಗೆ ಹೃತ್ಪೂರ್ವಕ ಬೀಳ್ಕೊಡುಗೆಯ ಸಮಾರಂಭವನ್ನು ಏರ್ಪಡಿಸಿತ್ತು,

ಸದರಿ ಸಮಾರಂಭದಲ್ಲಿ ಶ್ರೀಮತಿ ಜಯಶ್ರೀ ಕುಲಕರ್ಣಿಯವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಗ್ರಂಥಾಲಯವನ್ನು ಅಭಿವೃದ್ಧಿ ಪಡಿಸುವಲ್ಲಿ ಹಾಗೂ ಉನ್ನತೀಕರಿಸುವಲ್ಲಿ ಅವರ ಶ್ರಮವನ್ನು ಶ್ಲಾಘಿಸಲಾಯಿತು. ಅಲ್ಲದೇ ಸಮಸ್ತ ಸಿಬ್ಬಂದಿ ವರ್ಗವು ಅವರೊಂದಿಗೆ ಸುಮಧುರ ಸಂಬಂಧ ಹಾಗೂ ಒಡನಾಟವನ್ನು ಮೆಲುಕು ಹಾಕಿದರು. ಅವರಿಗೆ ಒಳ್ಳೆಯ ಆರೋಗ್ಯ ಹಾಗೂ ದೀರ್ಘಾಯುಷ್ಯ ಲಭಿಸಲೆಂದು ಆಶಿಸಿದರು. ಅವರ ಸುಪುತ್ರಿಯರು ವಿದೇಶದಿಂದ ವೀಡಿಯೊ ಕರೆ ಮುಖಾಂತರ ತಮ್ಮ ಆಶಯಗಳನ್ನು ವ್ಯಕಪಡಿಸಿದರು,

ನಿವೃತ್ತರಾಗುತ್ತಿರುವ ಶ್ರೀಮತಿ ಜಯಶ್ರೀ ಕುಲಕರ್ಣಿ ಇವರು ತಾವೂ ಸಹ ಸಿಬ್ಬಂದಿಗಳೊಂದಿಗೆ ಕಳೆದ ಉಲ್ಲಾಸದಾಯಕ ಕಾರ್ಯವೈಖರಿಯನ್ನು ನೆನೆದು ಗದ್ಗದಿತರಾದರು ಹಾಗೂ ತಮ್ಮ ಕಾರ್ಯ ನಿರ್ವಹಣೆಯಲ್ಲಿ ತಮ್ಮ ಜೀವನ ಸಂಗಾತಿ ಶ್ರೀಯುತ ಸುಹಾಸ ಕುಲಕರ್ಣಿಯವರ ಸಹಕಾರವನ್ನು ನೆನೆದರು.

ನಿರ್ದೇಶಕರಾದ ಪ್ರೊ ಬಸವಪ್ರಭು ಜಿರ್ಲಿ ಹಾಗೂ ಕುಲಸಚಿವರಾದ ಶ್ರೀ ವಿ ಟಿ ಹುನಗುಂದ ಅವರು ಮುಂಬರುವ ದಿನಗಳಲ್ಲಿ ಗ್ರಂಥಾಲಯದ ಉನ್ನತೀಕರಣಕ್ಕೆ ಶ್ರೀಮತಿ ಜಯಶ್ರೀ ಕುಲಕರ್ಣಿಯವರ ಸಲಹೆ ಸಹಕಾರಗಳನ್ನು ನಿರೀಕ್ಷಿಸುವದಾಗಿ ತಿಳಿಸಿದರು. ಸಿ.ಎಮ್.ಡಿ.ಆರ್ ನ ಸಮಸ್ತ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಗಳು ಹಾಜರಿದ್ದರು.









